ಶಾಂತಮ್ಮ ಹಿಹಿಹಿ ಅಂತ ನಕ್ಕು ಹೊರನಡೆದರು. ಇಲ್ಲಿಯ ವಾತಾವರಣ ಗಮನಿಸಿದರೆ ಶಾಂತಮ್ಮ ಅಷ್ಟು ಮಾತ್ರ ಪ್ರತಿಕ್ರಿಯಿಸಲು ಸಾಧ್ಯ ಅಂತ ಆ ಕ್ಷಣ ನನಗನಿಸಿತು.

ಹಿಂದಿನ ಕೇಸಿನ ಕುರಿತು ಕೆಲವು ಮಾತುಕತೆಗಳು ಜರುಗಿದವು. 'ಹಂಗೆ ನೋಡೀದ್ರೆ ಈ ಕೇಸ್‌ಗಿಂತ ಹಿಂದಿಂದು ಡಿಫರೆಂಟ್ ಇತ್ತು' ಅಂತ ಮಾತು ತೆಗೆದವರು ಸಿಸ್ಟರ್ ಡೇಸಿ. 'ಹೌದಲ್ಲ, ಕೆಲವು ತಮ್ ವೈಯಕ್ತಿಕ ದ್ವೇಷ ಸಾಧ್ಕೂದಿಕ್ಕೆ ಇಲ್ಲೀವರ್ಗೂ ಕೇಸ್ ತಂದಿ ನಮ್ಮ ಜೀವಾ ಹಣ್ ಮಾಡಿ ಇಡ್ತಾರೆ' ಅಂತ ತಮ್ಮದೊಂದು ಮಾತು ಜೋಡಿಸಿದರು ರಜಿಯಾ. 'ಹೌದು, ಆದರೆ ಈ ಕೇಸಿನಲ್ಲಿ ಎಂಥದೋ ಬೇರೆ ಥರ ಭಾವನಾತ್ಮಕ ಸಂಬಂಧದ ಸಮಸ್ಯೆಯಿದೆ ಅನಸ್ತದೆ' ಅನ್ನುತ್ತ ನಾನೂ ನನ್ನ ಕೇಸ್ ಫೈಲನ್ನು ಬ್ಯಾಗಿನಿಂದ ಹೊರ ತೆಗೆದು ಟೇಬಲ್ಲಿನ ಮೇಲಿರಿಸಿಕೊಂಡೆ. 'ನೀವ್ ಹೇಳಿದ್ದ ಸರಿ, ಭಾವನಾತ್ಮಕ ಸಂಬಂಧ ಇರೂವಲ್ಲಿ ಸಮಸ್ಯೆ ಇರೂದೇ' ಎನ್ನುತ್ತ ಸ್ವಲ್ಪ ದೊಡ್ಡ ದನಿಯಲ್ಲೇ ನಕ್ಕರು ಸಿಸ್ಟರ್ ಡೇಸಿ. ಅನ್ಯ ಭಾಷಿಕರು ಮಾತಾಡುವ ಕನ್ನಡದ ಧಾಟಿಯಲ್ಲಿ ಉಚ್ಚರಿಸುವ ಡೇಸಿ ಮತ್ತು ರಜಿಯಾ ಇಬ್ಬರ ವಿಶಿಷ್ಟ ಬಗೆಯ ಕನ್ನಡ ನನಗೆ ಯಾವಾಗಲೂ ಬೇರೆ ತರಹದ ಅನುಭವ ಕೊಡುತ್ತಿತ್ತು. ಡಬ್ಲ್ಯು.ಡಿ. ಕಚೇರಿಯ ಸಿಬ್ಬಂದಿ ಶಶಿರೇಖಾ ಈ ಕೇಸಿಗೆ ಸಂಬಂಧಪಟ್ಟ ಫೈಲನ್ನು ಹಿಡಿದು ಪ್ರವೇಶಿಸಿದರೆಂದರೆ ಮೀಟಿಂಗು ಆರಂಭಗೊಂಡಂತೆಯೇ. ಕಳೆದ ಮೂರು ವರ್ಷಗಳಿಂದ ಈ ಶಶಿರೇಖಾ ಮುಖದಲ್ಲಿ ಒಂದೇ ಒಂದು ಸಣ್ಣ ನಗುವನ್ನೂ ಕಂಡೇ ಇಲ್ಲದ ನಾವು ಮೂವರೂ ಆ ಭಾವಕ್ಕೆ ಅನುಗಾಲದ ಒಂದು ಸ್ಪಂದನ ಎಂಬಂತೆ ಪರಸ್ಪರ ಮುಖ ಮುಖ ನೋಡಿ ನಸುನಕ್ಕೆವು.

'ಸಂತ್ರಸ್ತೆ ಸಬೀನಾ ತೆಗ್ಗಿನಮನಿ ಎನ್ನುವವಳು ಡಿ.ಸಿ.ಯವರಿಗೆ ಸಲ್ಲಿಸಿದ ದೂರನ್ನು ಝೆರಾಕ್ಸ್ ಮಾಡಿಸಿ ಕಳೆದ ವಾರವೇ ಇವರಿಗೆಲ್ಲ ಕಳಿಸಿದ್ದೇನೆ ಮೇಡಂ' ಅಂದ್ರು ಶಶಿರೇಖಾ. 'ಹೌದು ಡಿ.ಸಿ. ಆಫೀಸ್‌ನಿಂದ ಫೋನ್ ಬಂದಿತ್ತು, ಈ ಸಲ ತಡ ಮಾಡಿದಿರಲ್ಲ ಹಿಯರಿಂಗ್ ಅರೆಂಜ್ ಮಾಡ್ಲಿಕ್ಕೆ? ಎಷ್ಟು ದಿನ ಆಯ್ತು ದೂರು ಬಂದು?' ಕನ್ನಡಕ ಏರಿಸುತ್ತ ಕೇಳಿದರು ಬಸಂತಿ ಮೇಡಂ. 'ನಮ್ಮ ಕಮಿಟಿಗೆ ಬಂದು ಆಗಲೇ ಎರಡು ವಾರಗಳ ಮೇಲಾಯ್ತು ಮೇಡಂ, ಆದರೆ ನಿಮ್ಮ ನಾಲ್ವರದೂ ಅನುಕೂಲ ನೋಡಿಕೊಂಡು ಸೇರಬೇಕಲ್ಲ? ಅತ್ತ ಕಚೇರಿ ಕೆಲಸವೂ ಜಾಸ್ತಿ ಮೇಡಂ, ಒಬ್ಬಳೇ ಆಗಿಬಿಟ್ಟಿದ್ದೇನೆ, ಇದೊಂದು ನಮಗೆ ಎಕ್ಸ್‌ಟ್ರಾ ಕೆಲಸವೇ' ಅಂತ ಗೋಳು ತೋಡಿಕೊಳ್ಳುವ ದನಿಯಲ್ಲಿ ಮುಖ ಸಣ್ಣ ಮಾಡಿದರು. 'ಇರಲಿ, ಸಂತ್ರಸ್ತೆ ಮತ್ತು ಆ ವ್ಯಕ್ತಿಯನ್ನು ಎಷ್ಟು ಗಂಟೆಗೆ ಬರಹೇಳಿದ್ದೀರಿ?' 'ಹನ್ನೊಂದೂವರೆಗೆ ಮೇಡಂ, ಅಷ್ಟರೊಳಗೆ ನಿಮಗೆ ಕೇಸಿನ ಬಗ್ಗೆ ಚರ್ಚಿಸಲು ಅವಕಾಶವಾಗಲಿ ಅಂತ' ತಲೆಯಾಡಿಸುತ್ತ ಮೇಡಂ ನಮ್ಮ ಬದಿ ತಿರುಗಿ 'ಮೂವರೂ ಕೇಸ್ ಸ್ಟಡಿ ಮಾಡಿದಿರಾ?' ಕೇಳುತ್ತ ಎದುರಿಗಿದ್ದ ಬಿಸ್ಲೆರಿ ಬಾಟಲನ್ನು ಎತ್ತಿ ಮುಚ್ಚಳ ತಿರುಗಿಸಿದರು. ಸಿಸ್ಟರ್ ಡೇಸಿ ಥಟ್ಟನೆ, 'ಸಬೀನಾ ಕೆಲ್ಸದ ಸ್ಥಳದಲ್ಲಿ ತನ್ ಮೇಲೆ ಫ್ಯಾಕ್ಟರಿ ಮಾಲೀಕ ಹಮೀದನಿಂದೇ ಲೈಂಗಿಕ ದೌರ್ಜನ್ಯ ಆಗೇತಿ ಅಂತ ಆರೋಪ ಮಾಡಿದ್ದು, ಅಬಾರ್ಷನ್ ಮಾಡ್ಸಿದಾರೆ ಅಂತ ಬೇರೆ ಬರಕೊಂಡಾಳೆ' ಎಂದದ್ದೇ ರಜಿಯಾ 'ಅಬಾರ್ಷನ್ ಆಗಿದೆ ಅನ್ನಾಕೆ ಸರೀ ಸಾಕ್ಷೀದು ನಹೀ ಮೇಡಂ, ಡಾಕ್ಟರ್ ಬರಕೊಟ್ ಒಂದು ಗುಳಿಗೀ ಚೀಟೀದು ಅಷ್ಟೇ ಐತಿ' ಅಂದರು. ನನಗೆ ಅಚ್ಚರಿಯಾಯ್ತು 'ಅಬಾರ್ಷನ್ನೇ ಕಾನೂನು ಬಾಹಿರ ಆಗಿರುವಾಗ, ಯಾವ ಡಾಕ್ಟರ್ ತಾನು ಅಬಾರ್ಷನ್ ಮಾಡಿದ್ದೇನೆ ಅಂತ ಸರ್ಟಿಫಿಕೇಟು ಕೊಡಲು ಸಾಧ್ಯ ಅಲ್ವೇ ಮೇಡಂ?' ಅಂತ ಕೇಳಿದೆ. ಮೇಡಂ 'ಯಸ್' ಅನ್ನುತ್ತ ಕನ್ನಡಕ ತೆಗೆದು ಟೇಬಲ್ಲಿನಲ್ಲಿಟ್ಟು ತಲೆಯಾಡಿಸಿದರು. ನನಗೆ ಆಡಬೇಕೆಂದರೂ ಅದಕ್ಕಿಂತ ಒಂದು ಹೆಚ್ಚು ಮಾತು ಸಿಗಲಿಲ್ಲ. ಎಂಟ್ಹತ್ತು ಸೆಕೆಂಡುಗಳ ಕಾಲ ಕೊಠಡಿಯಲ್ಲಿ ಮೌನ ಕವಿಯಿತು.

ತಮ್ಮ ಪಕ್ಕ ನಿಂತು ಯಾವುದೋ ಫೈಲುಗಳನ್ನು ಜೋಡಿಸುತ್ತಿದ್ದ ಸಿದ್ದುವನ್ನು ನೋಡುತ್ತ ಮೇಡಂ, 'ಹೊರ ಹೋಗು' ಅನ್ನುವಂತೆ ಸನ್ನೆ ಮಾಡಿದರು. ಮೀಟಿಂಗಿನ ವಿವರ ಅವನಿಗೆ ತಿಳಿಯುವದು